ದ್ವಿತೀಯ ಭಾಷೆ – ಕನ್ನಡ ಪರ್ಯಾಯ ಶೈಕ್ಷಣಿಕ ಯೋಜನೆ 2021–22 6ನೇ ತರಗತಿ

ಮಾಹೆ: ನವೆಂಬರ್–2021

| ಕ್ರ.ಸಂ | ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | ನವೆಂಬರ್ ಮಾಹೆ 1ನೇ ವಾರ | ಗದ್ಯ – ಎದೆಗುಂದದ ಧೀರರು<br>• ಜೀವನದಲ್ಲಿ ಎಂತಹ ತೊಂದರೆಗಳು ಬಂದರೂ ಎದೆಗುಂದದೆ ಧೈರ್ಯದಿಂದ ಮುನ್ನುಗ್ಗಬೇಕು ಎಂಬ ಸಂಗತಿಯನ್ನು ತಿಳಿಯುವರು.<br>• ಕೃತಿಕಾರರ ಪರಿಚಯವನ್ನು ಮಾಡಿಕೊಳ್ಳುವರು.<br>• ಜೂಲಿಯೋ ಇಗ್ಲೇಶಿಯಸ್‌ನ ಕುರಿತು ತಿಳಿಯುವರು.<br>• ಪಾಠದಲ್ಲಿ ಬಂದಿರುವ ಸರ್ವನಾಮ ಪದಗಳನ್ನು ಗುರುತಿಸುವರು.<br>• ಜೂಲಿಯೋ ಇಗ್ಲೇಶಿಯಸ್‌ನ ಸಾಧನೆಗಳನ್ನು ತಿಳಿಯುವರು. | • ಶಿಕ್ಷಕರು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿಕಲಚೇತನ ಸಾಧಕರ ಬಗೆಗೆ ವಿವರಿಸುವರು.<br>ಉದಾ– ಪಂಡಿತ ಪುಟ್ಟರಾಜ ಗವಾಯಿ<br>ಸುಧಾಚಂದ್ರನ್<br>ಸ್ಟೀಫನ್ ಹಾಕಿಂಗ್<br>https://youtu.be/HLN5GiVvrDQ<br>• ಕೃತಿಕಾರರ ಪರಿಚಯದ ಚಾರ್ಟ್ ತಯಾರಿಸುವ ಮೂಲಕ ಕೃತಿಕಾರರ ಪರಿಚಯ ಮಾಡುವುದು.<br>• ಸೂಕ್ತ ಸ್ವರಭಾರದೊಂದಿಗೆ ಗದ್ಯ ವಾಚನ ಮಾಡಿ ಜೂಲಿಯೋ ಇಗ್ಲೇಶಿಯಸ್‌ನ ಬಾಲ್ಯದ ಕುರಿತು ವಿವರಿಸುವರು.<br>• ಶಿಕ್ಷಕರು ಚಟುವಟಿಕೆಯ ಮೂಲಕ ಸರ್ವನಾಮ ಪದಗಳನ್ನು ಅರ್ಥೈಸುವರು.<br>• ಯೂಟ್ಯೂಬ್ ಲಿಂಕ್ ಮೂಲಕ ಜೂಲಿಯೋ ಇಗ್ಲೇಶಿಯಸ್‌ನ ಜೀವನ ಸಾಧನೆ ವಿವರಿಸುವರು.<br>https://youtu.be/21nxBklfeGU | • ಸುಧಾಚಂದ್ರನ್, ಪುಟ್ಟರಾಜ ಗವಾಯಿಗಳ ಕುರಿತು ಮಾಹಿತಿಯನ್ನು ಸಂಗ್ರಹಿಸುವರು.<br>• ಕೃತಿಕಾರರ ಚಾರ್ಟ್ ರಚಿಸಿ ವಾಕ್ಯರೂಪದಲ್ಲಿ ಬರೆಯುವರು.<br>• ಜೂಲಿಯೋ ಇಗ್ಲೇಶಿಯಸ್ ಕಂಡ ಕನಸನ್ನು ವಿವರಿಸುವರು.<br>• ಸರ್ವನಾಮ ಪದಗಳನ್ನು ಪಟ್ಟಿಮಾಡಿ ಬರೆಯುವುದು.<br>• ಜೂಲಿಯೋ ಇಗ್ಲೇಶಿಯಸ್‌ನ ಸಾಧನೆಗಳನ್ನು ಪಟ್ಟಿ ಮಾಡುವರು. |
| 02 | ನವೆಂಬರ್ ಮಾಹೆ 2ನೇ ವಾರ | • ಮಾಲತಿಹೊಳ್ಳರವರ ಜೀವನವನ್ನು ತಿಳಿಯುವರು.<br>• ಪದಗಳನ್ನು ಬಿಡಿಸಿ ಬರೆಯುವುದನ್ನು ಅರಿಯುವರು. | • ಯೂಟ್ಯೂಬ್ ಲಿಂಕ್ ಮೂಲಕ ಮಾಲತಿಹೊಳ್ಳರ ಜೀವನವನ್ನು ವಿವರಿಸುವರು.<br>https://youtu.be/OKpYPmZRLfU | |

| | | | | |
|---|---|---|---|---|
| 03 | **ನವೆಂಬರ್ ಮಾಹೆ 3ನೇ ವಾರ** | • ಮಾಲತಿಹೊಳ್ಳರ ಕ್ರೀಡಾಸಾಧನೆಯನ್ನು ಅರಿಯುವರು.<br>• ಮಾಲತಿಹೊಳ್ಳರ ಸಮಾಜಸೇವೆ , ಜೀವನ ಸಿದ್ಧಾಂತವನ್ನು ತಿಳಿಯುವರು.<br>• ಪಾಠದಲ್ಲಿ ಬಂದಿರುವ ಕೆಲವು ವಿರುದ್ಧಾರ್ಥಕ ಪದಗಳನ್ನು ಪಟ್ಟಿ ಮಾಡಿ ಅವುಗಳ ವಿದ್ಧಾರ್ಥಕಗಳನ್ನು ಬರೆಯುವರು.<br>• ಗಾದೆ ಮಾತುಗಳು ಮತ್ತು ಅವುಗಳ ಮಹತ್ವ ಅರಿಯುವರು.<br>**ಪತ್ರಲೇಖನ(ಪೂರಕ ಓದು)**<br>• ಪತ್ರಲೇಖನದ ವಿಧಗಳನ್ನು ಅರಿಯುವುದು.<br>• ವೈಯಕ್ತಿಕ (ಖಾಸಗಿ) ಪತ್ರದ ಒಕ್ಕಣೆಗಳನ್ನು ಅರಿಯುವರು.<br>• ಖಾಸಗಿ ಪತ್ರದ ಬರವಣಿಗೆಯ ಹಂತಗಳನ್ನು ತಿಳಿಯುವರು. | • ಪಧ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡಿ ಬರೆಯುವರು.<br>ಉದಾ- ನೂರಾಯಿತು, ತಿಂಗಳಿಗೊಮ್ಮೆ.<br>• ಮಾಲತಿಹೊಳ್ಳರ ಕ್ರೀಡಾ ಸಾಧನೆಗಳನ್ನು ವಿವರಿಸುವರು.<br>• ಮಾಲತಿಹೊಳ್ಳರ ಸಮಾಜಸೇವೆಯನ್ನು ವಿವರಿಸುವರು.<br>• ಪಾಠದಲ್ಲಿ ಬಂದಿರುವ ಕೆಲವು ವಿರುದ್ಧಾರ್ಥಕ ಪದಗಳನ್ನು ಪಟ್ಟಿ ಮಾಡಿ ಅವುಗಳ ವಿದ್ಧಾರ್ಥಕಗಳನ್ನು ಬರೆಯುವುದು.<br>ಉದಾ- ಕೀರ್ತಿ X ಅಪಕೀರ್ತಿ<br>• ಗಾದೆಗಳ ಮೂಲ ಅರ್ಥ, ಮಹತ್ವವನ್ನು ವಿವರಿಸಿ ಕೆಲವು ಗಾದೆ ಮಾತುಗಳನ್ನು ಪರಿಚಯಿಸುವರು.<br>ಉದಾ- "ಕಾಯಕವೇ ಕೈಲಾಸ"<br>"ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ"<br>• ಪತ್ರಲೇಖನದ ವಿಧಗಳನ್ನು ಶಿಕ್ಷಕರು ಚರ್ಚಿಸುವರು.<br>• ವಿದ್ಯಾರ್ಥಿಗಳಿಂದ ತಮ್ಮ ಬಂಧುಗಳ(ಸಂಬಂಧಗಳನ್ನು) ಪಟ್ಟಿ ಮಾಡಿಸುವರು.<br>ಉದಾ- ಚಿಕ್ಕಪ್ಪ,ಮಾವ. | • ಮಾಲತಿಹೊಳ್ಳರವರ ಬಾಲ್ಯಜೀವನದ ಬಗ್ಗೆ ವಿವರಿಸುವರು.<br>ನೀಡಿರುವ ಪದಗಳನ್ನು ಬಿಡಿಸಿ ಬರೆಯುವರು .<br>• ಮಾಲತಿಹೊಳ್ಳರವರ ಕ್ರೀಡಾಸಾಧನೆಗಳನ್ನು ಪಟ್ಟಿ ಮಾಡುವರು.<br>• ಮಾಲತಿಹೊಳ್ಳರವರ ಸಮಾಜಸೇವೆಯನ್ನು ಕುರಿತು ಬರೆಯುವರು.<br>• ವಿರುದ್ಧಾರ್ಥಕ ಪದಗಳನ್ನು ಬರೆಯುವರು.<br>• ತಮ್ಮ ಮನೆಯ ಹಿರಿಯರ ಸಹಾಯದಿಂದ ಗಾದೆಮಾತುಗಳನ್ನು ತಿಳಿದು ಬರೆಯುವರು.<br>• ಪತ್ರಲೇಖನದ ವಿಧಗಳನ್ನು ಬರೆಯುವುದು. |

| | | | | |
|---|---|---|---|---|
| 04 | ನವೆಂಬರ್ ಮಾಹೆ 4ನೇ ವಾರ | **ಐಕ್ಯಗಾನ**<br>• ಕವಿ ಪರಿಚಯವನ್ನು ಅರಿಯುವರು.<br>• ಸ್ವರಭಾರಕ್ಕೆ ಅನುಗುಣವಾಗಿ ಹಾಡುವುದನ್ನು ಕಲಿಯುವರು.<br>• ಪದ್ಯವನ್ನು ಆಲಿಸಿ ಅರ್ಥಗ್ರಹಿಸುವರು.<br>• ಪದ್ಯದ ಪ್ರತಿ ಖಂಡಿಕೆಯ ಸಾರಾಂಶವನ್ನು ಅರಿತು ವಿವಿಧತೆಯಲ್ಲಿ ಏಕತೆಯನ್ನು ತಿಳಿಯುವರು.<br>• ಮರ ಮತ್ತು ನದಿಗಳ ನಿದರ್ಶನದ ಮೂಲಕ ಅನೇಕತೆಯಲ್ಲಿ ಏಕತೆಯನ್ನು ಅರಿಯುವರು.<br>• ನಕ್ಷತ್ರಗಳು ಮತ್ತು ಸೂರ್ಯನನ್ನು ಉದಾಹರಿಸುವ ಮೂಲಕ ಭಿನ್ನತೆಯಲ್ಲಿ ಏಕತೆ ಭಾವವಿದೆ ಎನ್ನುವುದನ್ನು ಅರಿಯುವರು.<br>• ಧರ್ಮಾಚರಣೆ ಮತ್ತು ವೇಷಭೂಷಣಗಳ ಭಿನ್ನತೆಯಲ್ಲಿರುವ ಒಂದೇ ಭಾವವನ್ನು ಅರಿಯುವರು.<br>• ಭಾರತದ ವಿವಿಧ ಭಾಷೆಯಲ್ಲಿರುವ ಉಪರಾಷ್ಟ್ರೀಯತೆ ಹಾಗೂ ತ್ರಿವರ್ಣ ಧ್ವಜದಲ್ಲಿರುವ ರಾಷ್ಟ್ರೀಯತೆಯ ಭಾವ ಅರಿಯುವರು. | • ವಿವಿಧ ಮಾದರಿಯ ಪತ್ರ ಬರಹಗಳನ್ನು ಪ್ರದರ್ಶಿಸುವ ಮೂಲಕ ಪತ್ರ ಬರವಣಿಗೆಯ ಹಂತಗಳನ್ನು ವಿವರಿಸುವರು.<br>• ಕವಿಪರಿಚಯವನ್ನು ವ್ಯಕ್ತಿ ಚಿತ್ರದ ಮೂಲಕ ಪರಿಚಯಿಸುವರು.<br>https://youtu.be/bJmb9JXAKGk<br>https://youtu.be/louztJpa4GQ<br>• ಶಿಕ್ಷಕರು ಐಕ್ಯಗಾನ ಪದ್ಯವನ್ನು ರಾಗಬದ್ಧವಾಗಿ ಹಾಡುವರು.<br>https://youtu.be/c4aNmZ1fMGY<br>• ಪದ್ಯದ ಭಾವಾರ್ಥವನ್ನು ವಿವರಿಸಿ ಮಕ್ಕಳಿಂದ ವಾಕ್ಯರೂಪದಲ್ಲಿ ಬರೆಸುವುದು.<br>• ಮರ ಮತ್ತು ನದಿಗಳ ಚಿತ್ರಪಟದ ಮೂಲಕ ಅನೇಕತೆಯಲ್ಲಿ ಏಕತೆಯನ್ನು ಕುರಿತು ಚರ್ಚಿಸುವರು.<br>• ಸಾಸಿರ ಚಿಕ್ಕೆಗಳು ಹಾಗೂ ರವಿಯನ್ನು ಸಮೀಕರಿಸಿ ಭಾರತೀಯಲ್ಲಿ, ಭಿನ್ನತೆಯಲ್ಲಿಯೂ ಇರುವ ಏಕತಾಭಾವವನ್ನು ಚರ್ಚಿಸುವರು.<br>• ವಿವಿಧ ಆರಾಧನೆಯಲ್ಲಿರುವ ದೈವಭಾವದ ಏಕತೆಯನ್ನು ದೇವನೊಬ್ಬ ನಾಮ ಹಲವು ಎಂಬ ವಚನದೊಂದಿಗೆ ಚರ್ಚಿಸುವರು. | • ಬೇರೆ ಬೇರೆ ಬಂಧುಗಳಿಗೆ ಬಳಸುವ ಒಕ್ಕಣೆಯನ್ನು ಬರೆಯುವುದು. ತಾಯಿಯವರಿಗೆ ಶಾಲಾ ಪ್ರವಾಸದ ಅನುಭವವನ್ನು ಕುರಿತು ಪತ್ರವನ್ನು ಬರೆಯುವುದು.<br>• ಕವಿ ಪರಿಚಯವನ್ನು ವಾಕ್ಯರೂಪದಲ್ಲಿ ಕ್ರಮವಾಗಿ ಬರೆಯುವುದು.<br>• ರಾಗಬದ್ಧವಾಗಿ ಹಾಡುವುದು ಹಾಗೂ ಕಂಠಪಾಠ ಮಾಡುವುದು.<br>• ಪದ್ಯದ ಸಾರಾಂಶವನ್ನು ಬರೆಯುವುದು.<br>• ವಿವಿಧತೆಯಲ್ಲಿ ಏಕತೆಯನ್ನು ಸಾರುವ ಅಂಶಗಳನ್ನು ಪಟ್ಟಿ ಮಾಡುವರು. |

| | | | | |
|---|---|---|---|---|
| | | • ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯುವುದನ್ನು ಅರಿಯುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಗುರುತಿಸುವರು.<br>• ಪದಗಳನ್ನು ಬಿಡಿಸಿ ಬರೆಯುವುದನ್ನು ಅರಿಯುವರು. | • ಬಣ್ಣಬಣ್ಣದ ಹಸುಗಳು ಕರೆಯುವ ಹಾಲಿನ ಬಣ್ಣ ಮಾತ್ರ ಬಿಳಿಯಾಗಿರುವುದು ಏಕತೆಯನ್ನು ಬಿಂಬಿಸುವುದನ್ನು ಚರ್ಚಿಸುವರು.<br>• ಭಾರತದಲ್ಲಿನ ಪ್ರದೇಶ, ಭಾಷೆ,ನೆಲ ವಿಚಾರವಾಗಿ ಭಿನ್ನತೆಯ ಚರ್ಚೆಗಳಿದ್ದರೂ, ರಾಷ್ಟ್ರಧ್ವಜದ ವಿಚಾರದಲ್ಲಿ ಒಂದೇ ಆಗಿರುವುದನ್ನು ಚರ್ಚಿಸುವರು.<br>• ಪದಗಳ ಅರ್ಥಪ್ರಾಮುಖ್ಯತೆಯನ್ನು ಚರ್ಚಿಸಿ, ವಾಕ್ಯದಲ್ಲಿ ಬಳಸುವ ವಿಧಾನವನ್ನು ಬರೆಯುವ ರೀತಿಯನ್ನು ಬೆಳೆಸುವರು.<br>• ಪದ್ಯದಲ್ಲಿರುವ ಪ್ರಾಸಪದಗಳನ್ನು ಅಡಿಗೆರೆ ಎಳೆದು ಗುರುತಿಸಿ ಪಟ್ಟಿ ಮಾಡಲು ತಿಳಿಸುವುದು.<br>• ಪದ್ಯದಲ್ಲಿ ಬಂದಿರುವ ಬಿಡಿಸಿ ಬರೆಯಬಹುದಾದ ಪದಗಳನ್ನು ಪಟ್ಟಿ ಮಾಡಿಸಿ ಬಿಡಿಸಿ ಬರೆಯುವ ರೀತಿ ತಿಳಿಸುವರು. | • ಇರುಳಿಗೆ ಸಾಸಿರ ಚಿಕ್ಕೆ, ಹಗಲಿಗೆ ರವಿವೊಂದೆ ಈ ಪದ್ಯದ ಸಾಲಿನಲ್ಲಿರುವ ಭಾವೈಕ್ಯತೆಯನ್ನು ವಿವರಿಸುವರು.<br>• ದೇವನೊಬ್ಬ ನಾಮ ಹಲವು ಎಂಬ ನಾಣ್ಣುಡಿಯನ್ನು ವಿವರಿಸುವುದು.<br>• ರಾಷ್ಟ್ರಧ್ವಜದಡಿಯಲ್ಲಿ ಭಾರತೀಯರೆಲ್ಲ ಒಂದೇ ಎಂಬುದನ್ನು ಚರ್ಚಿಸುವುದು..<br>• ಕೊಟ್ಟಿರುವ ವಾಕ್ಯವನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯುವುದು.<br>• ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಪಟ್ಟಿ ಮಾಡುವುದು.<br>• ಕೊಟ್ಟಿರುವ ಪದ ಬಿಡಿಸಿ ಬರೆಯುವುದು. |

# ಅಭ್ಯಾಸ ಹಾಳೆ-1

**ತರಗತಿ- 6** **ಎದೆಗುಂದದ ಧೀರರು** **ದ್ವಿತೀಯ ಭಾಷೆ- ಕನ್ನಡ**

**ಅ. ಚಿತ್ರದಲ್ಲಿರುವ ಸಾಧಕರ ಮಾಹಿತಿಯನ್ನು ಸಂಗ್ರಹಿಸಿ ಬರೆಯಿರಿ.**







**ಆ. ಚಿತ್ರದಲ್ಲಿರುವ ಸನ್ನಿವೇಶವನ್ನು ನೋಡಿ ಅವರುಗಳನ್ನು ಗುರ್ತಿಸಿ ಬರೆಯಿರಿ:**







**ಇ. ಈ ಲೇಖಕರ ಪರಿಚಯದ ಚಾರ್ಟ್‌ನ್ನು ನೋಡಿ ವಾಕ್ಯ ರೂಪದಲ್ಲಿ ಬರೆಯಿರಿ:**




**ಈ. ಮಾದರಿಯಂತೆ ಬಿಡಿಸಿ ಬರೆಯಿರಿ:**

**ಮಾದರಿ– ವಿದ್ಯಾ + ಅಭ್ಯಾಸ = ವಿದ್ಯಾಭ್ಯಾಸ**

1. ಕೋಟ್ಯಂತರ = ________________ + ________________
2. ವಿಶ್ವದಾದ್ಯಂತ = ________________ + ________________
3. ನೂರಾಯಿತು = ________________ + ________________
4. ತಿಂಗಳಿಗೊಮ್ಮೆ =________________ + ________________
5. ಮುಟ್ಟಿರಲಿಲ್ಲ = ________________ + ________________

**ಉ. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. 'ಜೀವನ ಹೀಗೆ ಸಾಗುತಿದೆ' ಎಂಬ ಹೆಸರಿನ ಆಲ್ಬಂ ಅನ್ನು ಹೊರತಂದವರು ಯಾರು ?

________________________________________________

2. 'ಎದೆಗುಂದದ ಧೀರರು' ಯಾವ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ ?

________________________________________________

3. ಜೂಲಿಯೋ ಇಗ್ಲೇಶಿಯಸ್ ಫುಟ್‌ಬಾಲ್ ಕಲಿಯಲು ಯಾವ ಕ್ಲಬ್ ಸೇರಿದನು?

________________________________________________

4. ಜೂಲಿಯೋ ಇಗ್ಲೇಶಿಯಸ್ ತನ್ನ ನೋವು ಮರೆಯಲು ಏನು ಮಾಡಿದನು ?

________________________________________________

**ಊ. ಈ ಕೆಳಗಿನ ಪ್ರಶ್ನೆಗಳಿಗೆ 3–4 ವಾಕ್ಯಗಳಲ್ಲಿ ಉತ್ತರಿಸಿ:**

**1**. ಜೂಲಿಯೋ ಇಗ್ಲೇಶಿಯಸ್ ಯಾವ ರೀತಿ ರಾಷ್ಟ್ರಮಟ್ಟದ ಗೋಲ್‌ಕೀಪರ್ ಆದನು ?

________________________________________

________________________________________

________________________________________ .

**2**. ಜೂಲಿಯೋ ಇಗ್ಲೇಶಿಯಸ್ ಸಂಗೀತ ಕ್ಷೇತ್ರದಲ್ಲಿ ಮಾಡಿದ ಸಾಧನೆ ಏನು /

________________________________________

________________________________________

________________________________________ .

## ಅಭ್ಯಾಸ ಹಾಳೆ-2

**ತರಗತಿ – 6** | **ಎದೆಗುಂದದ ಧೀರರು** | **ದ್ವಿತೀಯ ಭಾಷೆ- ಕನ್ನಡ**

**ಅ. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ಮಾಲತಿಹೊಳ್ಳರವರು ಕಾಮವಬಿಲ್ಲು ಚಲನಚಿತ್ರದಲ್ಲಿ ಯಾರ ಜೊತೆ ಅಭಿನಯಿಸಿದ್ದಾರೆ ?

_______________________________________________

2. ಮಾಲತಿಹೊಳ್ಳರವರ ತಂದೆ ತಾಯಿಯ ಹೆಸರೇನು ?

_______________________________________________

3.ಮಾಲತಿಹೊಳ್ಳರವರು ತಮ್ಮ ಬಾಲ್ಯದಲ್ಲಿ ಚಿಕಿತ್ಸೆಗಾಗಿ ಸೇರಿದ ಸಂಸ್ಥೆ ಯಾವುದು?

_______________________________________________

4.ಮಾಲತಿಹೊಳ್ಳರವರ ಜೀವನ ಸಿದ್ಧಾಂತವೇನು ?

_______________________________________________

**ಆ. ಈ ಕೆಳಗಿನ ಪ್ರಶ್ನೆಗಳಿಗೆ 2-3 ವಾಕ್ಯಗಳಲ್ಲಿ ಉತ್ತರಿಸಿ:**

1. ಮಾಲತಿಹೊಳ್ಳರವರು ಯಾವ ಯಾವ ದೇಶಗಳ ಯಾವ ಯಾವ ಕ್ರೀಡಾಕೂಟಗಳಲ್ಲಿ ಭಾಗವಹಿಸಿದರು ?

_______________________________________________

_______________________________________________

_______________________________________________.

2. ಮಾಲತಿಹೊಳ್ಳರವರು ಮಾತೃ ಫೌಂಡೇಶನ್ ಯಾವ ಉದ್ದೇಶದಿಂದ ಸ್ಥಾಪಿಸಿದ್ದಾರೆ ?

_______________________________________________

_______________________________________________

_______________________________________________.

**ಇ. ಈ ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ:-**

1. ಅದೃಷ್ಟ X ____________________
2. ವಿಫಲತೆ X ____________________
3. ಕೀರ್ತಿ X ____________________
4. ಸ್ವಾವಲಂಬನೆ X ____________________
5. ಖ್ಯಾತಿ X ____________________

**ಈ. ಈ ಗಾದೆ ಮಾತುಗಳನ್ನು ಸುಳಿವುಗಳನ್ನು ಬಳಸಿಕೊಂಡು ಪೂರ್ಣಗೊಳಿಸಿರಿ:–**

1. ಕೈ ಕೆಸರಾದರೆ ______________________
2. ದುಡಿಮೆಯೇ ______________________
3. ಕಷ್ಟಪಟ್ಟರೆ ______________________
4. ತಾಯಿಗಿಂತ ಬಂಧುವಿಲ್ಲ, ______________________

(ಸುಳಿವು :– ಫಲವುಂಟು, ಉಪ್ಪಿಗಿಂತ ರುಚಿಯಿಲ್ಲ, ದುಡ್ಡಿನ ತಾಯಿ, ಬಾಯಿ ಮೊಸರು )

**ಉ. ಈ ಕೆಳಗಿನ ವಾಕ್ಯದಲ್ಲಿ ಬಂದಿರುವ ಸರ್ವನಾಮ ಪದಗಳನ್ನು ಗುರುತಿಸಿ ಬರೆಯಿರಿ :**

ಜೂಲಿಯೋ ಇಗ್ಲೇಶಿಯಸ್ ಗುಣಮುಖನಾಗಲು ಹಲವು ದಿನಗಳು ಬೇಕಾದವು. ಇದರಿಂದ ಅವನು ದುಃಖಿತನಾದನು. ಅವನು ತನ್ನ ನೋವು ಮರೆಯಲು ಹಾಡುಗಳನ್ನು ಬರೆದು ಹಾಡಿದನು. ಅವನ ಇಂಪಾದ ಧ್ವನಿ ಗಮನಿಸಿದ ದಾದಿಯೊಬ್ಬಳು ಗಿಟಾರ್ ಒಂದನ್ನು ನೀಡಿ ನೀನು ಚೆನ್ನಾಗಿ ಹಾಡೆಂದು ಆಶೀರ್ವದಿಸಿದಳು. ಅವಳು ಮಾಡಿದ ಉಪಕಾರದಿಂದ ಜೂಲಿಯೋ ಇಗ್ಲೇಶಿಯಸ್ ಸಂಗೀತದಲ್ಲಿ ಸಾಧನೆ ಮಾಡಿದನು.

1) ______________ 2) ______________

3) ______________ 4) ______________

5) ______________ 6) ______________

## ಅಭ್ಯಾಸ ಹಾಳೆ–3

**ತರಗತಿ – 6** **ಪತ್ರಲೇಖನ (ಪೂರಕ ಓದು )** **ದ್ವಿತೀಯ ಭಾಷೆ – ಕನ್ನಡ**

**ಅ. ಹೊಂದಿಸಿ ಬರೆಯಿರಿ:**

| | | |
|---|---|---|
| 1. ತಂದೆ | – | ತೀರ್ಥರೂಪಸಮಾನರಾದ |
| 2. ತಾಯಿ | – | ಪ್ರೀತಿಯ |
| 3. ಅಕ್ಕ | – | ತೀರ್ಥರೂಪ |
| 4. ತಮ್ಮ | – | ಮಾತೃಶ್ರೀ |
| 5. ಅತ್ತೆ | – | ಚಿರಂಜೀವಿ |
| 6. ಚಿಕ್ಕಪ್ಪ | – | ಮಾತೃಶ್ರೀ ಸಮಾನರಾದ |

**ಆ. ಈ ಪತ್ರದ ಮಾದರಿಯನ್ನು ಪೂರ್ತಿಮಾಡಿರಿ:–**

**ದಿನಾಂಕ :–** ________________

**ಸ್ಥಳ :–** _________________

_______________________ **ರವರಿಗೆ,**

______________________________________________________________________

______________________________________________________________________

______________________________________________________________________

______________________________________________________________________

______________________________________________________________________

______________________________________________________________________

______________________________________________________________________ .

. . . . . . . . . . . ಗಳೊಂದಿಗೆ

**(ಆಶೀರ್ವಾದ ನಿರೀಕ್ಷಿಸುತ್ತಾ )** **ನಿಮ್ಮ/ ನಿನ್ನ ಪ್ರೀತಿಯ,**

. . . . . . . . . . . . . . . . .

**( ಸಹಿ )**

ವಿಳಾಸ,

**ಇವರಿಗೆ,**

. . . . . . . . . . . .. . . . . . .   . .

. . . . . . . . . . . . . . . . . . . .

. . . . . . . . . . . . . . . .. . . . . .

## ಅಭ್ಯಾಸ ಹಾಳೆ–4

**ತರಗತಿ– 6** **ಐಕ್ಯಗಾನ (ಪದ್ಯ)** **ದ್ವಿತೀಯ ಭಾಷೆ – ಕನ್ನಡ**

**ಅ. ಈ ಕವಿಯ ಪರಿಚಯದ ಚಾರ್ಟ್‌ನ್ನು ನೋಡಿ ವಾಕ್ಯ ರೂಪದಲ್ಲಿ ಬರೆಯಿರಿ:**




**ಆ. ಈ ಕೆಗಿನ ಪದಗಳಿಗೆ ಸಮಾನಾರ್ಥಕ ಪದ ಬರೆಯಿರಿ.**

1. ಮರ = ________________ = ________________ = ________________
2. ನಕ್ಷತ್ರ = ________________ = ________________ = ________________
3. ರವಿ = ________________ = ________________ = ________________

**ಇ. ಈ ಕೆಳಗೆ ನೀಡಿರುವ ಪದಗಳನ್ನು ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ–**

1. ನಾವೆಲ್ಲರು – ________________________________________
2. ಕಡಲು – ________________________________________
3. ಚಲನೆ – ________________________________________

**ಈ. ಐಕ್ಯಗಾನ ಪದ್ಯದಲ್ಲಿ ಬಂದಿರುವ ಪ್ರಾಸಪದಗಳನ್ನು ಗುರುತಿಸಿ ಬರೆಯಿರಿ:**

1. ________________ – ________________
2. ________________ – ________________
3. ________________ – ________________

## ಅಭ್ಯಾಸ ಹಾಳೆ-5

**ತರಗತಿ - 6** | **ಐಕ್ಯಗಾನ (ಪದ್ಯ)** | **ದ್ವಿತೀಯ ಭಾಷೆ –ಕನ್ನಡ**

**ಅ. ಮಾದರಿಯಂತೆ ಬಿಡಿಸಿ ಬರೆಯಿರಿ:**

**ಮಾದರಿ:- ನಾವು + ಎಲ್ಲರು = ನಾವೆಲ್ಲರು**

1. ದೇಶದೊಳೆಲ್ಲಿದ್ದರು = ________________ + ________________
2. ನಮಗೊಂದೆ = ________________ + ________________
3. ಕಡಲೊಂದೆ = ________________ + ________________
4. ಚುಕ್ಕೆಗಳಿದ್ದರು = ________________ + ________________
5. ಬಿಳುಪೊಂದೆ = ________________ + ________________

**ಆ. ಹೊಂದಿಸಿ ಬರೆಯಿರಿ: –**

| | | |
|---|---|---|
| 1. ಕೊಂಬೆಗಳು ಚಾಚಿಕೊಂಡರು | – | ದೇವರು ಎಲ್ಲರಿಗೊಂದೆ |
| 2. ಸಾಸಿರ ಚುಕ್ಕೆಗಳಿದ್ದರು | – | ಬದುಕುವ ಜನ ಒಂದೆ |
| 3. ನೂರು ಬಗೆಯ ಆರಾಧನೆ ಇದ್ದರು | – | ಮರಕ್ಕೆ ಬುಡವೊಂದೆ. |
| 4. ನಡೆ-ನುಡಿ ಭೇದಗಳೆಷ್ಟೇ ಇದ್ದರು | – | ಹಗಲಿಗೆ ರವಿ ಒಂದೇ |
| | – | ಹಾರಾಡುವ ಧ್ವಜ ಒಂದೇ. |

**ಇ. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ:**

1. ಐಕ್ಯಗಾನ ಪದ್ಯದಲ್ಲಿ ನದಿಗಳು ಮತ್ತು ಕಡಲು ಏನನ್ನು ಸಂಕೇತಿಸುತ್ತದೆ?

________________________________________________

2. ಐಕ್ಯಗಾನ ಪದ್ಯದಲ್ಲಿ ಚುಕ್ಕಿಗಳು ಮತ್ತು ಸೂರ್ಯ ಏನನ್ನು ಧ್ವನಿಸುತ್ತದೆ?

________________________________________________

3. ಐಕ್ಯಗಾನ ಪದ್ಯದಲ್ಲಿ ಹಸುಗಳ ಬಣ್ಣ ಹಾಗೂ ಹಾಲಿನ ಬಿಳುಪು ಏನನ್ನು ಪ್ರತಿಬಿಂಬಿಸುತ್ತದೆ?

________________________________________________

4. ರಾಷ್ಟ್ರಧ್ವಜ ಯಾವುದರ ಸಂಕೇತ?

________________________________________________

**ಈ. ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ:**

**1.** ಅನೇಕತೆಯಲ್ಲಿ ಏಕತೆಯನ್ನು ಮರ ಮತ್ತು ನದಿಗಳು ಹೇಗೆ ತಿಳಿಸುತ್ತವೆ?

______________________________________________

______________________________________________

______________________________________________

**2.** ಧರ್ಮಾಚರಣೆ ಹಾಗೂ ವೇಷಭೂಷಣಗಳಲ್ಲಿ ಭಿನ್ನವಾಗಿದ್ದರೂ ಭಾವ ಒಂದೇ ಆಗಿರುವಲ್ಲಿ ಕವಿ ನೀಡಿರುವ ನಿದರ್ಶನಗಳಾವುವು?

______________________________________________

______________________________________________

______________________________________________